ಏಕಾದಶೀ ತಿಥಿಗಿಂತಲೂ ಶ್ರೇಷ್ಠವಾದ ತಿಥಿಯು ಮತ್ತೊಂದಿಲ್ಲ

"ಶ್ರೀಕೃಷ್ಣನಿಗೆ ಏಕಾದಶಿ ತಿಥಿಯು ಜನ್ಮಾಷ್ಟಮಿಗಿಂತಲೂ ಶ್ರೇಷ್ಠ ಮತ್ತು ಪ್ರಿಯವಾದದ್ದು. ಪರಮ ಕರುಣಾಮಯನಾದ ಪರಮೇಶ್ವರ ಶ್ರೀಕೃಷ್ಣನು ಸ್ವಯಂ ಮಾಧವ ತಿಥಿ ಅರ್ಥಾತ್ ಏಕಾದಶಿಯ ಸ್ವರೂಪವನು ಧಾರಣೆಮಾಡಿ ಈ ಜಗತ್ತಿನಲ್ಲಿ ವಿರಾಜಮಾನನಾಗಿದ್ದಾನೆ. ಅನಂತ ಸ್ವರೂಪ ವಿಷ್ಣುಮಯೀ ಶಕ್ತಿಯು ಸಮಸ್ತ ಜೀವರಿಗೆ ಎಲ್ಲ ಪ್ರಕಾರದ ಮಂಗಳವನ್ನುಂಟುಮಾಡುವ ಉದ್ದೇಶದಿಂದ ಪರಮಶುಭಕರವಾದ ಏಕಾದಶಿ ತಿಥಿಯ ರೂಪದಲ್ಲಿ ಪ್ರಕಟಿತವಾಗಿದೆ."

(ಯುಗಾಚಾರ್ಯ ಶ್ರೀಲ ಭಕ್ತಿವೇದಾಂತ ನಾರಾಯಣ ಗೋಸ್ವಾಮೀ ಮಹಾರಾಜರು 'ಗುರುದೇವರು')

ವಿರೋಧದಿಂದಾದರು ಏಕಾದಶಿ ಉಪವಾಸದ ಫಲವು ಒಂದು ಕೋಟಿ ಪಟ್ಟು ಅಧಿಕ!

"ಏನಾದರು ಒಬ್ಬ ವ್ಯಕ್ತಿ ಅನ್ಯರ ಮೂಲಕ ವೈರದಿಂದಾದರು ಸಹ ಏನಾದರೂ ಏಕಾದಶಿ ಉಪವಾಸದ ವ್ರತವನ್ನು ಆಚರಿಸುವನೋ ಆಗ ಅವನಿಗೆ ಏಕಾದಶಿಯ ಉಪವಾಸವನ್ನು ಮಾಡುವುದರಿಂದ ಯಾವುದೇ ವಿರೋಧ ಉಂಟಾಗುವುದಿಲ್ಲ ಆ ಜನರ ಅಪೇಕ್ಷೆಯು ಅವನಿಗೆ ಒಂದು ಕೋಟಿ ಪಾಲು ಅಧಿಕ ಫಲ ಪ್ರಾಪ್ತಿಯಾಗುತ್ತದೆ. ಏನಾದರು ಒಬ್ಬ ವ್ಯಕ್ತಿ ಇತರರಿಗೆ ಏಕಾದಶಿ ವ್ರತವನ್ನು ಆಚರಿಸಲು ಪ್ರೇರಣೆ ನೀಡಿ ಅವರಿಗೆ ಏಕಾದಶಿಯ ಉಪವಾಸಕ್ಕೆ ಪ್ರವೃತ್ತಗೊಳಿಸಿದರೆ, ಆಗ ಆ ವ್ಯಕ್ತಿಯ ಅನೇಕ ಜನ್ಮಗಳ ಪೂರ್ವ ಪಾಪಕರ್ಮಗಳು ಮತ್ತು ಮುನ್ಬರುವ ಜನ್ಮಗಳಲ್ಲಿ ಮಾಡಬಹುದಾದ ಪಾಪಕರ್ಮಗಳೂ ಸಹ ಸುಟ್ಟು ಬೂದಿಯಾಗುತ್ತದೆ. ಏಕಾದಶಿಯನ್ನು ಪ್ರಚಾರ ಮಾಡುವಂತಹ ವ್ಯಕ್ತಿಗೆ ಸಮಾನವಾಗಿ ಯಾರಿಗು ಸಹ ಭಗವಾನ್ ಶ್ರೀಕೃಷ್ಣ ಮತ್ತು ಶ್ರೀಶಿವನ ಪ್ರೇಮಾಸ್ಪದರಾಗುವುದಿಲ್ಲ. ಏಕಾದಶಿಯಂದು ಅನ್ನ ಭೋಜನ ಮಾಡುವುದರಿಂದ ಸ್ವಮಾತೃ ಗಮನ, ಗೋಮಾಂಸ-ಭಕ್ಷಣ, ಸುರಾಪಾನ ಇತ್ಯಾದಿ ಕಾರ್ಯಗಳಿಗಿಂತಲೂ ಅಧಿಕ ನಿಂದನೀಯವಾದದ್ದು.

(ಶ್ರೀಮನ್ಮಧ್ವಾಚಾರ್ಯ-ವಿರಚಿತ ದಿವ್ಯಗ್ರಂಥ 'ಶ್ರೀಕೃಷ್ಣಮಹಾರ್ಣವ')

ಶ್ರೀ ಏಕಾದಶಿ ವ್ರತೋಪವಾಸದ ಮೂಲಕ ಪರಲೋಕಗತನಾದ ತಂದೆಗೆ ಆಧ್ಯಾತ್ಮಿಕ ಲಾಭ

ಮುಂಬಯಿ ನಗರದ ಒಬ್ಬ ಸಜ್ಜನನ ತಂದೆ ತೀರಿಕೊಂಡ ನಂತರ ಅವನ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದನು. ಆದರೆ ಅವನ ತಂದೆ ನೋಡಲು ದುಃಖಿತನಾಗಿದ್ದನು. ಅವನು ಕೊಳೆಯಾದ ಹರಿದ ವಸ್ತ್ರವನ್ನು ಧರಿಸಿದ್ದನು. ಅವನು ಕನಸಿನಲ್ಲಿ ಬಂದು ಸಹಾಯವನ್ನು ಬೇಡುತ್ತಿದ್ದನು. ಆ ಸಜ್ಜನನು ಶ್ರೀಪಾದ ಭಕ್ತಿವೇದಾಂತ ದಂಡೀ ಮಹಾರಾಜರ ಪ್ರೇರಣೆಯಿಂದ ಏಕಾದಶಿ ಉಪವಾಸವನ್ನು ಆಚರಿಸಲು ಪ್ರಾರಂಭಿಸಿದನು. ಅವನು ತನ್ನ ಒಂದು ಏಕಾದಶಿಯ ಫಲವನ್ನು ತನ್ನ ತಂದೆಗೆ ಸಮರ್ಪಿಸಿದನು. ಕೆಲವು ದಿನಗಳ ನಂತರ ಅವನಿಗೆ ಕನಸಿನಲ್ಲಿ ತನ್ನ ತಂದೆಯ ದರ್ಶವವಾಯಿತು. ಆಗ ಅವನ ತಂದೆ ಅತ್ಯಂತ ಪ್ರಸನ್ನನಾಗಿರುವುದನ್ನು ಕಂಡನು. ಅವನ ತಂದೆ ಬಿಳಿ ಪಂಚೆ ಮತ್ತು ಕುರ್ತ ಬಟ್ಟೆಯನ್ನು ಧರಿಸಿ ಹಣೆಗೆ ಗೋಪಿಚಂದನ ಊರ್ಧ್ವ-ಪುಂಡ್ರ ತಿಲಕವನ್ನು ಧಾರಣೆಮಾಡಿ, ಕಂಠದಲ್ಲಿ ತುಳಸಿ ಮಾಲೆ ಮತ್ತು ಕರದಲ್ಲಿ ತುಳಸಿ ಮಾಲೆ ಹಿಡಿದು ಜಪ ಮಾಡುತ್ತಿರುವುದನ್ನು ಕಂಡನು. ಅವನು ಆನಂದದಿಂದ ತನ್ನ ಸುಪುತ್ರನಿಗೆ ಆಶೀರ್ವಾದವನ್ನು ಮಾಡುತ್ತ ಸ್ವಯಂ ಏಕಾದಶಿಯ ಕೃಪೆಯಿಂದ ಸದ್ಗತಿಪ್ರಾಪ್ತವಾದ ಶುಭ ಸಮಾಚಾರವನ್ನು ತಿಳಿಸಿದನು.


ಶ್ರೀಮಾಧವ-ತಿಥಿ

[ಶ್ರೀಏಕಾದಶಿಯ ಶಾಸ್ತ್ರೀಯ ಹಾಗೂ ವೈಜ್ಞಾನಿಕ ಮಹತ್ವಗಳು]




ಶ್ರೀಭಕ್ತಿಪ್ರಜ್ಞಾನ ಗೌಡೀಯ ವೇದಾಂತ ವಿದ್ಯಾಪೀಠ ಪ್ರಕಾಶನ





ಆಚಾರ್ಯ-ಕೇಶರಿ ಶ್ರೀಲ ಭಕ್ತಿಪ್ರಜ್ಞಾನ ಕೇಶವ ಗೋಸ್ವಾಮೀ ಮಹಾರಾಜರು

ನೀವು ಶ್ರೀಲ ಭಕ್ತಿವೇದಾಂತ ಸ್ವಾಮೀ ಮಹಾರಾಜರಿಗೆ ಸನ್ಯಾಸವನ್ನು ಪ್ರಸಾದಿಸಿದಿರಿ. ಶ್ರೀ ಕುರೇಶರು ತಮ್ಮ ಪ್ರಾಣವನ್ನು ಸಂಕಟದಲ್ಲಿಹಾಕಿ ಶ್ರೀ ರಾಜಾನುಜಾಚಾರ್ಯರ ಜೀವವನ್ನು ರಕ್ಷಣೆ ಮಾಡಿದರು. ನೀವು ಸಹ ಜೀವಾಪಾಯವನ್ನು ಲೆಖಿಸದೆ ಒಂದು ಪ್ರಾಣಹಗರಣವಾಗುವಂತಹ ಧಾಳಿಯಿಂದ ನವದ್ವೀಪ ಧಾಮದಲ್ಲಿ ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕುರರ ರಕ್ಷಣೆಯನ್ನು ಮಾಡಿದಿರಿ. ನೀವು ಠಾಕುರ್ ಭಕ್ತಿವಿನೋದ ಇನ್ಸ್ಟಿಟ್ಯೂಟ್‌ನಲ್ಲಿ ರವಿವಾರದ ಬದಲಾಗಿ ಏಕಾದಶಿ ಮತ್ತು ಪಂಚಮಿ ದಿನಗಳಲ್ಲಿ ಸಾಪ್ತಾಹಿಕ ರಜೆಯನ್ನು ನೀಡುತ್ತಿದ್ದಿರಿ. ಏಕಾದಶಿಯು ಮಾಧವ-ತಿಥಿಯಾಗಿದೆ ಮತ್ತು ಪಂಚಮಿ ಸರಸ್ವತೀ ದೇವಿಯ ಹಾಗೂ ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಪ್ರಭುಪಾದರ ಶುಭ ಆವಿರ್ಭಾವ ತಿಥಿಯಾಗಿದೆ. ನೀವು ಪ್ರತಿದಿನ ಮೂರು ಲಕ್ಷ ಹರಿನಾಮವನ್ನು ಜಪಿಸುತ್ತಿದ್ದಿರಿ. ನೀವು ಕೃಪೆಮಾಡಿ ಎಲ್ಲ ಭಕ್ತರಿಗೆ ನಾಮಪ್ರೇಮವನ್ನು ಪ್ರಸಾದಿಸುವಿರಿ.



ಶ್ರೀಲ ಭಕ್ತಿವೇದಾಂತ ಸ್ವಾಮೀ ಮಹಾರಾಜರು

ನೀವು ಪಾಶ್ಚಾತ್ಯ ದೇಶಗಳಲ್ಲಿ ಹರಿನಾಮ ಮತ್ತು ಏಕಾದಶಿ ಮಹಾತ್ಮ್ಯವನ್ನು ಪ್ರಚಾರ ಮಾಡಿರುವಿರಿ. ತಮ್ಮ ತಿರೋಭಾವಕ್ಕೆ ಮೊದಲು ನೀವು ಶ್ರೀಲ ಭಕ್ತಿವೇದಾಂತ ನಾರಾಯಣ ಗೋಸ್ವಾಮೀ ಮಹಾರಾಜರನ್ನು ನಿಮ್ಮ ಶಿಷ್ಯರಿಗೆ ಸಹಾಯ ಮಾಡಲು ಅರ್ಪಣೆ ನೀಡಿದಿರಿ. ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ಶ್ರೀಲ ಭಕ್ತಿವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರು 'ಗುರುದೇವರು' ನಲವತ್ತು ಭಾರಿ ವಿಶ್ವ ಪ್ರದಕ್ಷಿಣೆಯನ್ನು ಮಾಡುತ್ತ ಶ್ರೀಗೌರವಾಣಿಯ ಪ್ರಚಾರವನ್ನು ಮಾಡಿದ್ದಾರೆ.

